**ಓಎಸ್ ಸಂಖ್ಯೆಃ 221/2023 ಡಿಡಬ್ಲ್ಯೂಃ1**

**ದಿನಾಂಕಃ 18-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರಿಂದ**

1. ನಾನು ಪ್ರತಿವಾದ ಪತ್ರದಲ್ಲಿ ಕೇಳಿದ ಆಸ್ತಿಗಳು ಕೇವಲ ನಮ್ಮ ನಮ್ಮ ಮನೆತನದ ಗರಾಣಕ್ಕೆ ಸಂಬಂಧಿಸಿದಂತೆ ಮಾತ್ರ ಪಾಲು ವಿಭಾಗ ಕೇಳುತ್ತಿದ್ದೇನೆ. ನನಗೆ ಹಿಸ್ಸೆ ಇದ್ದಷ್ಟು ಪ್ರತಿವಾದಿ 2 ಮತ್ತು 3 ಇವರಿಗೂ ಸಹ ಇದೆ ಎಂದರೆ ನಿಜ.

2. ದಾವಾ ತಪಶೀಲು ದಲ್ಲಿ ತೋರಿಸಿದ ಸರ್ವೆ ನಂಬ್ರ 199 ಪ್ಲಾಟ್ ನಂಬ್ರ 32 ಬ್ಯಾಡಗಿ ಎಪಿಎಂಸಿಯಲ್ಲಿರುವ ಅದು ಪ್ರತಿವಾದಿ 2 ಗಂಡ ಮಲ್ಲಿಕಾರ್ಜುನ ಸ್ವಂತ ಖರೀದಿಸಿದ ಆಸ್ತಿ ಎಂದರೆ ನಿಜ. ಮಲ್ಲಿಕಾರ್ಜುನ ತೀರಿಕೊಂಡಿದ್ದರಿಂದ ಪ್ರತಿವಾದಿ 2 ಮತ್ತು 3 ಇವರು ಮಾಲೀಕರು ಎಂದರೆ ನಿಜ. ಮೊದಲು ಮಲ್ಲಿಕಾರ್ಜುನನ ಸ್ವಾಧೀನದಲ್ಲಿತ್ತು ಈಗ ಪ್ರತಿವಾದಿ 2 ಮತ್ತು 3 ಇವರ ಸ್ವಾಧೀನದಲ್ಲಿದೆ ಎಂದರೆ ನಿಜ. ಅದೇ ರೀತಿ ಆ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನದು ಯಾವುದೇ ತಕರಾರು ಇರುವುದಿಲ್ಲ.

3. ನನ್ನ ಪ್ರಮಾಣ ಪತ್ರದ ಖಂಡಿಕೆ ನಂಬ್ರ 4 ರಲ್ಲಿ ತೋರಿಸಿದ ದಾವಾ ಆಸ್ತಿ ನಂಬ್ರ 16 ಸುಳ್ಳಿನಿಂದ ಕೂಡಿದೆ ಎಂದರೆ ಸರಿ ಅಲ್ಲ. ಅದು ನನಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ ಅಲ್ಲ. ಅದು ಬೆರಳಚ್ಚಿನಿಂದ ತಪ್ಪಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಉಳಿದಿದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**